ಆರ್ ಐ ಡಿ ಎಫ್–13 ರಡಿಯಲ್ಲಿ ಅನುದಾನ ಒದಗಿಸಲು ಕಾರ್ಯಕ್ರಮ ರೂಪಿಸಲಾಗುತ್ತಿದ್ದು, ಅನುದಾನದ ಲಭ್ಯತೆಯ ಆಧಾರದ ಮೇಲೆ ಮೂಲಭೂತ ಸೌಕರ್ಯ ಒದಗಿಸಲು ಆಸ್ಪದವಾಗುತ್ತದೆ

ಆ) ಹೌದು

1618 (1975) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಂಜ್ರಾ ನದಿಗೆ ಮಹಾರಾಷ್ಟ್ರ ರಾಜ್ಯದಲ್ಲಿರುವ ಬ್ಯಾರೇಜ್‌ಗಳನ್ನು ಎತ್ತರವಾಗಿ ಕಟ್ಟುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ,

ಆ) ಮಹಾರಾಷ್ಟ್ರದ ಈ ಕ್ರಮದಿಂದ ಮಾಂಜ್ರಾ ನದಿಗೆ ಕಡಿಮೆ ನೀರು ಹರಿದು ಬರುವುದರಿಂದ ಈ ಭಾಗದ ರೈತರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ,

ಇ) ಹಾಗಿದ್ದರೆ ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಮಾಂಜ್ರಾ ನದಿಗೆ ಮಹಾರಾಷ್ಟ್ರ ರಾಜ್ಯದಲ್ಲಿರುವ ಬ್ಯಾರೇಜಿನ ಎತ್ತರವನ್ನು ಎತ್ತರಿಸುತ್ತಿರುವುದು ದಿನಪತ್ರಿಕೆಯ ವರದಿಯಲ್ಲಿ ಪ್ರಕಟಿಸಿರುವುದನ್ನು ಸರ್ಕಾರ ಗಮನಿಸಿದೆ

ಆ,ಇ) ಮಹಾರಾಷ್ಟ್ರದ ಬ್ಯಾರೇಜಿನ ಎತ್ತರವನ್ನು ಎತ್ತರಿಸುವುದರ ಕುರಿತು ಖಚಿತವಾಗಿ ಮಾಹಿತಿ ಪಡೆಯುವುದರ ಉದ್ದೇಶದೊಂದಿಗೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಮಹಾರಾಷ್ಟ್ರದ ಲಾತೂರ್ ವಿಭಾಗವನ್ನು ಸಂಪರ್ಕಿಸಲಾಗಿದ್ದು, ಅಲ್ಲಿನ ಅಧಿಕಾರಿಗಳು ಮಾಹಿತಿಯನ್ನು ಒದಗಿಸಲು ನಿರಾಕರಿಸುತ್ತಾರೆಂದು ಸಣ್ಣ ನೀರಾವರಿ ಇಲಾಖೆಯು ತಿಳಿಸಿದೆ

ಈಗ ದಿನ ಪತ್ರಿಕೆಯ ಪ್ರಕಟನೆಯನ್ನು ಆಧರಿಸಿ ಮಹಾರಾಷ್ಟ್ರ ಕಾರ್ಯದರ್ಶಿಗಳಿಗೆ ದಿನ ಪತ್ರಿಕೆಯ ಪ್ರಕಟಣೆಯಲ್ಲಿನ ವಿಷಯವನ್ನು ತಿಳಿಸಿ

ವಿವರಗಳನ್ನು ಕಳುಹಿಸಿಕೊಡುವಂತೆ ಕೋರಲಾಗಿದೆ ಮಹಾರಾಷ್ಟ್ರದ ಬ್ಯಾರೇಜನ್ನು ಎತ್ತರಿಸುವ ಕುರಿತು ನಿಖರವಾದ ಮಾಹಿತಿಯನ್ನು ಪಡೆದು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು

1619 (2305) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ್ ಸಡಕ್ ಯೋಜನೆಯಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ (ಗ್ರಾಮವಾರು ವಿವರಗಳನ್ನು ಒದಗಿಸುವುದು),

ಆ) ಇದಕ್ಕಾಗಿ ವೆಚ್ಚ ಮಾಡಲಾದ ಹಣವೆಷ್ಟು,

ಇ) ಎಷ್ಟು ಕಾಮಗಾರಿಗಳು ಜಾರಿಯಲ್ಲಿವೆ (ವಿವರ ಒದಗಿಸುವುದು),

ಈ) ಈ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಬಂದಿದ್ದಲ್ಲಿ, ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)

ಅ) ಬೀದರ್ ಜಿಲ್ಲೆಯ ಹುಲಸೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ್ ಸಡಕ್ ಯೋಜನೆಯಲ್ಲ ಕಳೆದ 2 ವರ್ಷಗಳಲ್ಲಿ ಒಂದು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಅದರ ವಿವರ ಈ ಕೆಳಕಂಡಂತಿದೆ

ಕ್ರ.ಸಂ	ಕಾಮಗಾರಿಯ ಹೆಸರು	ರಸ್ತೆಯ ಉದ್ದ (ಕಿ ಮೀ)	ಅಂದಾಜು ಮೊತ್ತ	ವೆಚ್ಚವಾದ ಮೊತ್ತ
	ಭಾಲ್ಕಿ ತಾಲ್ಲೂಕಿನ ವರವಟ್ಟಿ ವಾಡಿ ರಸ್ತೆ	2 27	34 15	34 15